# IN THE COURT OF THE ADDL. SENIOR CIVIL JUDGE & JMFC., GUBBI

# **OS -26/2025**

Witness present and duly sworn on : 06-08-2026

Cross Examination: by Counsel for Plaintiff :

ಪೂರ್ವಕ್ಕೆ ಪುಟ್ಟಲಿಂಗಮ್ಮ ರವರ ಜಮೀನು ಪಶ್ಚಿಮಕ್ಕೆ ರಾಜಪ್ಪ ಮತ್ತು ಚಿಕ್ಕರಾಮಮಯ್ಯರವರ ಜಮೀನು, ಉತ್ತರಕ್ಕೆ ಬೀರಯ್ಯ ರವರ ಜಮೀನು, ದಕ್ಷಿಣಕ್ಕೆ ಪುಟ್ಟಲಿಂಗಮ್ಮ ರವರ ಜಮೀನಿನ ಇದರ ಚೆಕ್ಕುಬಂದಿಯಲ್ಲಿ ಇರುವ ಆಸ್ತಿಯ ವಿಸ್ತೀರ್ಣ 22 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್ಕುಬಂದಿಯಲ್ಲಿರುವ 22 ಗುಂಟೆ ಜಮೀನು ನಮಗೆ ಸಂಬಂದ ಇಲ್ಲ ಎಂದರೆ ಸರಿ . ಸದರಿ ಚೆಕ್ಕುಬಂದಿಯಲ್ಲಿರುವ 22 ಗುಂಟೆ ಜಮೀನು ಮೊದಲು ಬೀರಲಿಂಗಯ್ಯರವರ ತಂದೆಗೆ ಇತ್ತು ಅವರ ನಂತರ ಬೀರಲಿಂಗಪ್ಪರವರು ಇದ್ದಾರೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಬೀರಲಿಂಗಪ್ಪರವರು ಸರ್ವೆ ನಂ 16/2 ಜಮೀನಿನಲ್ಲಿ ಇರುತ್ತೆರೆ ಮತ್ತು ಅವರು ಸರ್ವೆ ನಂ 16/12 ರಲ್ಲಿ ಇರುವುದಿಲ್ಲ. ನನಗೆ ಸರ್ವೆ ನಂ 16/2 ಸಂಬಂಧಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಸರ್ವೆ ನಂ 16/3 ಆಗಿರುತ್ತದೆ. ಸರ್ವೆ ನಂ 16/12 ನನಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿ .

ಮೇಲೆ ಹೇಳಿದ ಚೆಕ್ಕುಬಂದಿ ಯ 22 ಗುಂಟೆ ಸ್ವತ್ತನ್ನು ವಾದಿ ಬೀರಲಿಂಗಪ್ಪರವರು ರವರ ತಂದೆ ಮುದ್ದಯ್ಯರವರು ದಿಃ 04-12-1967 ರಂದು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತದಲ್ಲಿ ಸರ್ವೆ ನಂ 16/12 ರ ಬದಲಿಗೆ ಸರ್ವೆ ನಂ 16/2 ಎಂದು ನಮೂದು ಮಾಡಿದ್ದರು ಎಂದರೆ ಸರಿಯಲ್ಲ. 22 ಗುಂಟೆ ಜಮೀನಿನ ಚೆಕ್ಕುಬಂದಿ ಸರ್ವೆ ನಂ 16/12 ರೆವೆನಿ ನಕಾಶೆಗೆ ತಾಳೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಸ್ವಾದೀನಅನುಭವದಲ್ಲಿ ಇರುವ ಸ್ವತ್ತಿಗೆ ಕೊಳವೆ ಬಾವಿ ತೆಗೆಸಿ ತೋಟ ಮಾಡಿದ್ದಾರೆ ಎಂದರೆ ಸರಿ . ಕ್ರಯಪತ್ರದಲ್ಲಿ ಸರ್ವೆ ನಂ 16/2 ಎಂದು ತಪ್ಪಾಗಿ ನಮೂದು ಅಗಿದ್ದ ಕಾರಣ ವಾದಿಯ ತಂದೆಯ ಹೆಸರಿಗೆ ಸರ್ವೆ ನಂ 16/2 ರ ಪಹಣಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ರಂಗಯ್ಯರವರ ಹೆಸರಿಗೆ ತಪ್ಪಾಗಿ ಸರ್ವೆ ನಂ 16/12 ರ ಖಾತೆ ಪಹಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ 16/2 ಮತ್ತು ಸರ್ವೆ ನಂ 16/12 ನಮಗೆ ಸೇರಿಲ್ಲ ಎಂದರೆ ಸರಿ . ಸರ್ವೆ ನಂ 16/2 ಮತ್ತು 16/12 ಜಮೀನುಗಳ ಮಾಹಿತಿ ನನಗೆ ಗೊತ್ತಿಲ್ಲ ಎಂದರೆ ಸರಿ .

ನನ್ನ ತಾತ ಗಂಗೇಗೌಡರವರು ಸರ್ವೆ ನಂ 16/3 ಜಮೀನನ್ನು ಲಿಂಗಯ್ಯರವರಿಂದ 1947 ರಲ್ಲಿ ಖರೀದಿ ಮಾಡಿದ್ದರು. ನನ್ನ ತಾತ ಖರೀದಿ ಮಾಡಿದ್ದ ಸರ್ವೆ ನಂ 16/3 ಜಮೀನನ ಚೆಕ್ಕುಬಂದಿ ಪೂರ್ವಕ್ಕೆಃಕಣ್ಣಮ್ಮನ ಜಮೀನು, ಪಶ್ಚಿಮಕ್ಕೆಃ ಮುದ್ದಯ್ಯ ರವರ ಜಮೀನು, ಉತ್ತರಕ್ಕೆಃ ಸಿದ್ದಮಾರಯ್ಯ ಮತ್ತು ರಂಗಯ್ಯ ರವರ ಜಮೀನು, ದಕ್ಷಿಣಕ್ಕೆಃ ಬೀರಲಿಂಗಯ್ಯ , ಬೀರಯ್ಯರವರ ಜಮೀನು. ನನ್ನ ತಾತ ಖರೀದಿ ಮಾಡಿದ್ದ ಜಮೀನಿನ ಪೂರ್ವಕ್ಕೆ ಸರ್ಕಾರಿ ಸ್ವತ್ತು , ಪಶ್ಚಿಮಕ್ಕೆ ಗಂಗೇಗೌಡರವರ ಹೊಲ, ಉತ್ತರಕ್ಕೆ ಕಣ್ಣಮ್ಮ ರವರ ಹೊಲ ಮತ್ತು ದಕ್ಷಿಣಕ್ಕೆ ಗಂಗೇಗೌಡರವರ ಜಮೀನು ಎಂದರೆ ಸರಿ . ಸದರಿ ಚೆಕ್ಕುಬಂದಿಯ ಸ್ವತ್ತನ್ನು ನಮ್ಮ ಕುಟುಂಬದವರು ಬೀರಯ್ಯರವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಮಾರಾಟ ಆಗಿರುವ ಸರ್ವೆ ನಂ 16/5 ಎ ಎಂದರೆ ಸರಿಯಲ್ಲ. ನಾವು ಸರ್ವೆ ನಂ 16/3 ರ ಜಮೀನನ್ನು ಮಾರಾಟ ಮಾಡಿಲ್ಲ. ಪೂರ್ವಕ್ಕೆ ಸರ್ಕಾರಿ ಸ್ವತ್ತು , ಪಶ್ಚಿಮಕ್ಕೆ ಗಂಗೇಗೌಡರವರ ಹೊಲ, ಉತ್ತರಕ್ಕೆ ಕಣ್ಣಮ್ಮ ರವರ ಹೊಲ ಮತ್ತು ದಕ್ಷಿಣಕ್ಕೆ ಗಂಗೇಗೌಡರವರ ಜಮೀನು ರ ಚೆಕ್ಕುಬಂದಿಯಲ್ಲಿ ನಾವು ಇದ್ದೇವೆ. ಸದರಿ ಜಮೀನು ಸರ್ವೆ ನಂ 16/3 ರಲ್ಲಿ ಇರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸದರಿ ಚೆಕ್ಕುಬಂದಿಯು ಸರ್ವೆ ನಂ 16/2 ರಲ್ಲಿ ಬರುತ್ತದೆ ಎಂದು ನಾನು ಹೇಳಿರುವುದಿಲ್ಲ. ಸದರಿ ಚೆಕ್ಕುಬಂದಿಯ ಸ್ವತ್ತನ್ನು 7 ನೇ ಪ್ರತಿವಾದಿ ಬೀರಯ್ಯರವರು ಖರೀದಿ ಮಾಡಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ 16/2 ರಲ್ಲಿ 20 ಗುಂಟೆ ಮತ್ತು ಸರ್ವೆ ನಂ 16/3 ರಲ್ಲಿ 6 ಗುಂಟೆ ರ ಖಾತೆಯು ನನಗೆ ಮತ್ತು ಸಹೋದರರಿಗೆ ಜಂಟಿ ಖಾತೆ ಆಗಿರುತ್ತದೆ. ಸದರಿ ಸರ್ವೆ ನಂ 16/2 ರಲ್ಲಿ 20 ಗುಂಟೆ ಮತ್ತು ಸರ್ವೆ ನಂ 16/3 ರಲ್ಲಿ 6 ಗುಂಟೆ ಜಮೀನುಗಳು 1947 ರ ಕ್ರಯಪತ್ರದಲ್ಲಿ ಬಂದಿರುವ ಸ್ವತ್ತುಗಳು. ಎಲ್ಲಿಯವರೆಗೆ ಸರ್ವೆ ನಂ 16/3 ರ ದಾಖಲೆಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ 16/2 ರಲ್ಲಿ 20 ಗುಂಟೆ ಖಾತೆ ನಮ್ಮ ಹೆಸರಿಗೆ ಇದೆ ಎಂದು ಹೇಳಿರುವುದಿಲ್ಲ. 26 ಗುಂಟೆಗೆ ಚೆಕ್ಕುಬಂದಿ 1947 ರ ಕ್ರಯಪತ್ರದಲ್ಲಿ ಇದ್ದಂತೆ ಸರಿ ಇದೆ ಎಂದರೆ ಸರಿ .ಸರ್ವೆ ನಂ 16/2 ರಲ್ಲಿ 20 ಗುಂಟೆ ಮತ್ತು ಸರ್ವೆ ನಂ 16/3 ರಲ್ಲಿ 6

ಗುಂಟೆ ರ ಖಾತೆಯು ಯಾವಾಗ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ 16/2 ರಲ್ಲಿ 20 ಗುಂಟೆ ಮತ್ತು ಸರ್ವೆ ನಂ 16/3 ರಲ್ಲಿ 6 ಗುಂಟೆ ರ ಖಾತೆ ಅಗಿದೆ ಎಂದು ಸುಮಾರು 2 ವರ್ಷಗಳ ಹಿಂದೆ ನಾನು ಮತ್ತು ನನ್ನ ಅಣ್ಣ ತಮ್ಮಂದಿರು ವಿಬಾಗ ಮಾಡಿಕೊಳ್ಳುವಾಗ ತಿಳಿಯಿತು. ಸದರಿ ಖಾತೆಯನ್ನು ಸರಿ ಮಾಡಿಕೊಳ್ಳಲು ನಾವು ಪ್ರಯತ್ನ ಪಟ್ಟಿಲ್ಲ. ನಮ್ಮ ಪಾಲುಪಟ್ಟಿಯಲ್ಲಿ ಸರ್ವೆ ನಂ 16/3 ಎಂದು ನಮೂದು ಮಾಡಿದ್ದು, ಸರ್ವೆ ನಂ 16/2 ಎಂದು ನಮೂದು ಮಾಡಿಲ್ಲ ಎಂದರೆ ಸರಿ . ನಮ್ಮ ಪಾಲುಪಟ್ಟಿಯಲ್ಲಿ ಚೆಕ್ಕುಬಂದಿ ನಮೂದು ಮಾಡಿದ್ದಾರ ಎಂದರೆ ನನಗೆ ಗೊತ್ತಿಲ್ಲ.

ಖಾತೆ ಮತ್ತು ಪೋಡಿ ಆಗುವಾಗ ಅರ್ಜಿ ನೀಡಬೇಕು ಎಂದರೆ ಸರಿ . ಸರ್ವೆ ನಂ 16/2 ರಲ್ಲಿ 20 ಗುಂಟೆ ಮತ್ತು ಸರ್ವೆ ನಂ 16/3 ರಲ್ಲಿ 6 ಗುಂಟೆ ರ ಖಾತೆ ಆಗುವಾಗ ಅರ್ಜಿ ನೀಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ನಾವು ಬೀರಯ್ಯರವರಿಗೆ ಮಾರಾಟ ಮಾಡಿರುವ ಸರ್ವೆ ನಂ 16/5ಎ ರ ದಾಖಲೆಯಲ್ಲಿ ಯಾವ ವಿಸ್ತೀರ್ಣ ಮತ್ತು ಚೆಕ್ಕುಬಂದಿ ನಮೂದು ಮಾಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಪಾಲುಪಟ್ಟಿಯಲ್ಲಿ ಇತರೆ ಎಲ್ಲಾ ಸ್ವತ್ತುಗಳಿಗೆ ಚೆಕ್ಕುಬಂದಿ ನಮೂದು ಮಾಡಿದ್ದೇವೆ ಎಂದರೆ ಸರಿ . ಅದರೆ ಸರ್ವೇ ನಂ 16/3 ರ ಚೆಕ್ಕುಬಂದಿ ಪಾಲುಪಟ್ಟಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರ್ವೆ ನಂ 16/3 ರಿಂದ ಸರ್ವೆ ನಂ 16/2 ರಲ್ಲಿ ನಮ್ಮ ಹೆಸರಿಗೆ ಪಹಣಿ ಬಂದಿದ್ದ ಕಾರಣ ಚೆಕ್ಕುಬಂದಿ ನಮೂದು ಮಾಡಿಲ್ಲ. ಪೋಡಿ ಮತ್ತು ಪಹಣಿಯು ಯಾವುದಾದರೂ ಆಗಿದ್ದರೂ ಸಹ ಚೆಕ್ಕು ಬಂದಿ ಬದಲಾಗುವುದಿಲ್ಲ ಎಂದರೆ ಸರಿ . ನಾವು 1947 ರಲ್ಲಿ ಖರೀದಿ ಮಾಡಿದ್ದ ಆಸ್ತಿಯನ್ನು ಬೀರಯ್ಯ ರವರಿಗೆ ಸರ್ವೆ ನಂ 16/5ಎ ರಲ್ಲಿ ಮಾರಾಟ ಮಾಡಿದ್ದ ಕಾರಣ ಸರ್ವೆ ನಂ 16/2 ಜಮೀನನ್ನು ಕಬಳಿಸಲು ಪಾಲುಪಟ್ಟಿಯಲ್ಲಿ ಚೆಕ್ಕುಬಂದಿ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ನಿಡಿ 3 ದಾಖಲೆಯು ಸರ್ವೆ ನಂ 16/3 ರ ದಾಖಲೆ ಎಂದರೆ ಸರಿ . ನಾನು ಸರ್ವೆ ನಂ 16/2 ರ ಮ್ಯುಟೇಶನ್ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಸರ್ವೆ ನಂ 16/2 ನಮಗೆ ಸಂಬಂಧಿಸಿರುವುದಿಲ್ಲ.

ಶಿವಣ್ಣ ಬಿನ್ ಲೇ ಗುಜ್ಜಾರಪ್ಪ ಎಂದರೆ ನನ್ನ ದೊಡ್ಡಪ್ಪನ ಮಗ. ನಮ್ಮ ಪಾಲುಪಟ್ಟಿಯಲ್ಲಿ ನನ್ನ ದೊಡ್ಡಪ್ಪನ ಮಕ್ಕಳು ಸೇರಿರುವುದಿಲ್ಲ. ನನ್ನ ತಂದೆ ಮತ್ತು ದೊಡ್ಡಪ್ಪ

ಯಾವಾಗ ಬೇರೆ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಂಚಾಯಿತಿ ಪಾರಿಕತ್ ಆಗಿದೆ ಎಂದರೆ ಸರಿ . ಸದರಿ ದಾಖಲೆ ನನ್ನ ಹತ್ತಿರ ಇದೆ ಎಂದರೆ ಸರಿ . ಪಂಚಾಯಿತಿ ಪಾರಿಕತ್ ನಮಗೆ ಅನುಕೂಲ ಆಗದೇ ಇದ್ದ ಕಾರಣ ಅದನ್ನು ಹಾಜರುಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 16/3 ಪಂಚಾಯಿತಿ ಪಾರಿಕತ್ ನನ್ನ ತಾತನ ಹೆಸರಿಗೆ ಬಂದಿತ್ತು . ಸದರಿ ಪಾರಿಕತ್ ನ್ನು ನಾನು ಹಾಜರುಪಡಿಸಬಲ್ಲೆನು. ನಾನು ಉದೇಶಕಪೂರ್ವಕವಾಗಿ ಪಂಚಾಯಿತಿ ಪಾರಿಕತ್ ನ್ನು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇನೆ. ಗಂಗೇಗೌಡ ಎಂದರೆ ನನ್ನ ತಾತ. ಸರ್ವೆ ನಂ 16/3 ರ ಪಹಣಿಯಲ್ಲಿ ಲಕ್ಷ್ಮಮ್ಮ, ಗುಜ್ಜಾರಪ್ಪ , ಹನುಮಂತಪ್ಪ , ಗಂಗಣ್ಣ , ಗುಡ್ಡಯ್ಯ ಎಂದು ನಮೂದು ಇದೆ ಎಂದರೆ ಲಕ್ಷ್ಮಮ್ಮ ನನ್ನ ತಾಯಿ, ಹನುಮಂತಪ್ಪ, ಗಂಗಣ್ಣ ನನ್ನ ಅಣ್ಣ , ಗುಡ್ಡಯ್ಯ ಎಂದರೆ ನಾನು. ಸದರಿ ಪಹಣಿಯು 26 ಗುಂಟೆ ವಿಸ್ತೀರ್ಣಕ್ಕೆ ಇದೆ ಎಂದರೆ ಸರಿ . ಆದ ಕಾರಣ ನಮಗೆ ಸರ್ವೆ ನಂ 16/2 ರಲ್ಲಿ ಯಾವುದೇ ಜಮೀನು ಬರಬೇಕಾಗಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಗಂಗೇಗೌಡರವರ ಕ್ರಯಪತ್ರ ದಂತೆ ನಮಗೆ ಸರ್ವೆ ನಂ 16/3 ಬರಬೇಕಾಗಿರುತ್ತದೆ. ಮಲ್ಲಯ್ಯ ಎಂದರೆ ಗಂಗೇಗೌಡರವರಿಂದ ಖರೀದಿ ಮಾಡಿರುವ ವ್ಯಕ್ತಿ . ಸಣ್ಣಲಿಂಗಯ್ಯ ಎಂದರೆ ಮಲ್ಲಯ್ಯರವರ ತಂದೆ.

ನನಗೆ ದಾವೆಯ ವಿಚಾರವಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ನನಗೆ ಗೊ್ತಲ್ಲ ಎಂದರೆ ಸರಿ . ವಾದಿಗೆ ತೊಂದರೆ ಕೊಡಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

sd/-

Addl. Senior Civil Judge and
JMFC., Gubbi